# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

## ಹೆಚ್.ಆರ್.ಸಿ ಸಂಖ್ಯೆ: 2206/10/31/2020–(SB-III)

## ದಿನಾಂಕ: 30.03.2022

## ಉಪಸ್ಥಿತರು: ಶ್ರೀ ಆರ್.ಕೆ ದತ್ತ ಮಾನ್ಯ ಸದಸ್ಯರು

**ದೂರುದಾರರು:**
ಶ್ರೀ ಎನ್ ಲಕ್ಕಪ್ಪ
ಬಿನ್ ನರಸಿಂಹಯ್ಯ,
ನಂ. 664, 2ನೇ ಅಡ್ಡ ರಸ್ತೆ,
ವಿವೇಕಾನಂದನಗರ,
ಜಾಲಹಳ್ಳಿ ಕ್ರಾಸ್,
ಬೆಂಗಳೂರು–560058.

## ಆದೇಶ

ದೂರುದಾರರಾದ ಎನ್. ಲಕ್ಕಪ್ಪ ರವರನ್ನು ಪೀಣ್ಯ ಪೊಲೀಸ್ ಠಾಣೆಯ ಪಿ.ಎಸ್.ಐ. ಬಿರಾಣಿ ಮತ್ತು ಪೇದೆ ರಂಗಸ್ವಾಮಿ ರವರು ಬಂದು ನಿನ್ನ ಬಾಮೈದ ಎಲ್ಲಿದ್ದಾನೆ ಹೇಳು ಎಂದು ಕೇಳಿದ್ದು, ಆಗ ಅವರಿಗೂ ತಮಗು ಸಂಸಾರದ ವಿಚಾರವಾಗಿ ಗಲಾಟೆ ನಡೆದು ನಾವು ಮಾತನಾಡುತ್ತಿಲ್ಲವೆಂದು ಹಾಗೂ ಆತನು ಎಲ್ಲಿದ್ದಾನೆ ಎಂಬುದು ತನಗೆ ಗೊತ್ತಿಲ್ಲವೆಂದು ಹೇಳಿದರೂ ಕೇಳದೆ ಈಗ್ಗೆ 2 ತಿಂಗಳ ಮುಂಚೆ ತನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಒಂದು ದಿನ ಪೂರ್ತಿ ಅಕ್ರಮವಾಗಿ ಬಂದಿಸಿದಲ್ಲದೆ ದಿನಾಂಕ 26.07.2020 ರಂದು ಭಾನುವಾರ ರಾತ್ರಿ 8–30 ರಿಂದ 9–00 ಗಂಟೆ ಸಮಯದಲ್ಲಿ ಮತ್ತೆ ತಮ್ಮ ಮನೆ ಹತ್ತಿರ ಬಂದು ತನ್ನನ್ನು ಹೊರಗಡೆ ಕರೆದು ಸಾರ್ವಜನಿಕರು ಓಡಾಡುವ ರಸ್ತೆಯಲ್ಲಿ ನಿಲ್ಲಿಸಿಕೊಂಡು ಪಿ.ಎಸ್.ಐ ರವರು ಅವಾಚ್ಯ ಶಬ್ದಗಳಿಂದ ಬೈಯ್ದು, ನಿನ್ನ ಬಾಮೈದ ಎಲ್ಲಿದ್ದಾನೆ ಹೇಳು ಎಂದು ಕೇಳಿದ್ದು, ನನಗೆ ಗೊತ್ತಿಲ್ಲ ಸ್ವಾಮಿ ಎಂದರೂ ಬಿಡದೆ ತನ್ನನ್ನು ಸಾರ್ವಜನಿಕವಾಗಿ ನಿಂದಿಸಿ ಅವಮಾನ ಮಾಡಿದ್ದಾರೆ. ಪೇದೆ ರಂಗಸ್ವಾಮಿಯವರು ತನ್ನ ಮೇಲೆ ದೌರ್ಜನ್ಯವೆಸಗಿರುತ್ತಾರೆ. ತನಗೆ ಸಂಬಂಧವಿಲ್ಲದ ವಿಚಾರಕ್ಕೆ ತನಗೆ ಮೇಲ್ಕಂಡಂತೆ ಕಿರುಕುಳ, ಹಿಂಸೆ ನೀಡಿ ದೌರ್ಜನ್ಯವೆಸಗಿರುವ ಮೇಲ್ಕಂಡವರ ಮೇಲೆ ಕಾನೂನು ಕ್ರಮ ಜರುಗಿಸಿ ತನಗೆ ನ್ಯಾಯ ಕೊಡಿಸಬೇಕೆಂದು ದೂರರ್ಜಿಯನ್ನು ಸಲ್ಲಿಸಿರುತ್ತಾರೆ.

ದೂರರ್ಜಿಯ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ಉತ್ತರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ವರದಿ ಸಲ್ಲಿಸುವಂತೆ ಆದೇಶಿಸಿದ್ದು, ಸದರಿಯವರು ದಿನಾಂಕ 12.09.2020 ರ ತಮ್ಮ ಪತ್ರ ಸಂಖ್ಯೆ: ಅಪರಾಧ/KSHRC/31/ಡಿಸಿಪಿ/ಉ/2020 ರಲ್ಲಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ವರದಿಯನ್ನು ದೂರುದಾರರ ಅಭಿಪ್ರಾಯಕ್ಕೆ ಕಳುಹಿಸಿದ್ದು, ದೂರುದಾರರು ದಿನಾಂಕ 09.11.2020 ರ ತಮ್ಮ ಪತ್ರದಲ್ಲಿ ಪೀಣ್ಯ ಪೊಲೀಸ್ ಠಾಣೆಯ ಉಪ ವಿಭಾಗದ ವ್ಯಾಪ್ತಿಯ ಯಶವಂತಪುರ ಸಹಾಯಕ ಪೊಲೀಸ್ ಆಯುಕ್ತರಿಗೆ ಹೇಳಿಕೆ ನೀಡಿದ್ದರೂ ಸಹ ತನ್ನ ಹೇಳಿಕೆಯನ್ನು ಪರಿಗಣಿಸದೆ ಸತ್ಯವನ್ನು ಮರೆಮಾಚಿ ತಮಗೆ ಸುಳ್ಳು ವರದಿ ನೀಡಿರುತ್ತಾರೆಂದು ಅಭಿಪ್ರಾಯದಲ್ಲಿ ಸಲ್ಲಿಸಿರುತ್ತಾರೆ.

ದೂರರ್ಜಿ, ವರದಿ ಮತ್ತು ದೂರುದಾರರ ಅಭಿಪ್ರಾಯವನ್ನು ಪರಿಶೀಲಿಸಿದ ಆಯೋಗವು ದೂರುದಾರರಾದ ಶ್ರೀ ಲಕ್ಕಪ್ಪ ರವರ ಹೇಳಿಕೆ ಹಾಗೂ ಆಯೋಗಕ್ಕೆ ಸಲ್ಲಿಸಿರುವ ಅಭಿಪ್ರಾಯದ ಬಗ್ಗೆ ಮರುಪರಿಶೀಲಿಸಲು ಉಪಪೊಲೀಸ್ ಆಯುಕ್ತರು, ಉತ್ತರ ವಿಭಾಗ, ಬೆಂಗಳೂರು ರವರಿಗೆ ಸೂಚಿಸಿರುತ್ತದೆ. ಅದರಂತೆ ದಿನಾಂಕ 29.01.2021 ರಂದು ತಮ್ಮ ಪತ್ರ ಸಂಖ್ಯೆ: ಅಪರಾಧ/ KSHRC/31/ಡಿಸಿಪಿ/ಉ/2020 ರ ವರದಿಯಲ್ಲಿ ಪ್ರವೀಣ್ ಈಗಾಗಲೇ ರೌಡಿಶೀಟರ್ ಆಗಿದ್ದು, ಅಲ್ಲದೇ ಮೊಬೈಲ್ ಅಂಗಡಿಯಲ್ಲಿ ಸಹ ಗಲಾಟೆ ಮಾಡಿ ಹೊಡೆದಾಡಿಕೊಂಡಿದ್ದು, ಆತನ ವಿಳಾಸ ಅರ್ಜಿದಾರರಾದ ಲಕ್ಕಪ್ಪರವರ ಮನೆಯೇ ಆಗಿದ್ದರಿಂದ, ಪೊಲೀಸರು ಪ್ರವೀಣನನ್ನು ಹುಡುಕಿಕೊಂಡು ಅರ್ಜಿದಾರರರಾದ ಲಕ್ಕಪ್ಪ ರವರ ಮನೆಯ ಬಳಿ ಹೋಗಿರುವುದರಿಂದ ಪ್ರವೀಣನಿಗೆ ಆಶ್ರಯ ನೀಡಿರುವುದರಿಂದ ತನಗೆಲ್ಲಿ ತೊಂದರೆಯಾಗುತ್ತದೆಂಬ ಉದ್ದೇಶದಿಂದ ಪೊಲೀಸರ ನೈತಿಕ ಸ್ಥೈರ್ಯವನ್ನು ಕುಂದು ಮಾಡಲು ಹಾಗೂ ರೌಡಿ ಆಸಾಮಿಗೆ ಆಶ್ರಯ ನೀಡಿರುವುದನ್ನು ತಪ್ಪಿಸಿಕೊಳ್ಳಲು ಈ ರೀತಿ ಸತ್ಯಕ್ಕೆ ದೂರಾವಾದ ದೂರನ್ನು ನೀಡಿರುತ್ತಾರೆ ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ವರದಿಯಲ್ಲಿ ಕೋರಿರುತ್ತಾರೆ. ಸದರಿ ವರದಿಗಳಲ್ಲಿ ದೂರುದಾರರ ಹೇಳಿಕೆ ಬಗ್ಗೆ ಪ್ರಸ್ತಾಪ ಮಾಡಿರುವುದಿಲ್ಲ.

ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿ, ದೂರರ್ಜಿ, ವರದಿಗಳು ಹಾಗೂ ಅಭಿಪ್ರಾಯದ ಪ್ರತಿಗಳನ್ನು ಆಯೋಗದ ತನಿಖಾ ವಿಭಾಗಕ್ಕೆ ಕಳುಹಿಸಿ ದೂರುದಾರರ ಹೇಳಿಕೆ ಪಡೆದು ಕೂಲಂಕುಷವಾಗಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಆಯೋಗದ ಪೊಲೀಸ್ ಮಹಾನಿರೀಕ್ಷಕರು ಸಲ್ಲಿಸಿದ ವರದಿಯಲ್ಲಿ ದೂರುದಾರರಿಗೆ ಪೊಲೀಸರು ಅವಾಚ್ಯ ಶಬ್ದಗಳಿಂದ ಬೈಯ್ದು ತೊಂದರೆ ಕೊಟ್ಟಿದನ್ನು ಪ್ರತ್ಯಕ್ಷವಾಗಿ ನೋಡಿರುವ ಸಾಕ್ಷಿದಾರರಾದ ಶ್ರೀ ಕುಮಾರ್ ರವರನ್ನು ಆಯೋಗದ ವಿಚಾರಣಾ ಅಧಿಕಾರಿ ಮುಂದೆ ಹಾಜರುಪಡಿಸಿದ್ದು, ಸದರಿಯವರನ್ನು ವಿಚಾರಣೆ ಮಾಡಲಾಗಿ "ದೂರುದಾರರು ತನಗೆ ಚಿಕ್ಕಪ್ಪನಾಗಬೇಕು, ಈಗ್ಗೆ 6 ತಿಂಗಳ ಹಿಂದೆ ಪೀಣ್ಯ ಪೊಲೀಸ್ ಠಾಣೆಯ ಪೊಲೀಸರಾದ ಶ್ರೀ ಲಕ್ಕಪ್ಪ ರವರ ಮನೆ ಬಳಿ ಬಂದು ಅವರನ್ನು ಮನೆಯಿಂದ ಹೊರಗೆ ಕರೆದು ನಿನ್ನ ಬಾಮ್ಮೈದ ಪ್ರವೀಣ್ ಎಲ್ಲಿದ್ದಾನೆ ತೋರಿಸು ಬಾ ಎಂದು ಹೇಳಿದರು. ಆಗ ಅವರು ತನ್ನ ಬಾಮ್ಮೈದ ತನ್ನ ಮನೆಯಲ್ಲಿ ಇಲ್ಲ ಆತನು ಎಲ್ಲಿದ್ದಾನೆಂದು ತನಗೆ ಗೊತ್ತಿಲ್ಲ ಮನೆ ಹತ್ತಿರ ಪದೇ ಪದೇ ಏಕೆ ಬರುತ್ತೀರಾ ಎಂದು ಹೇಳಿದ್ದಕ್ಕೆ ಶ್ರೀ ರಂಗಸ್ವಾಮಿ ರವರು ತನ್ನ ಚಿಕ್ಕಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಸಾಹೇಬರ ಹತ್ತಿರ ಹೇಳು ಬಾ

ಎಂದು ಅವರ ಜೊತೆಯಲ್ಲಿ ಕರೆದುಕೊಂಡು ಹೋಗಿ ಜಾಲಹಳ್ಳಿ ಮುಖ್ಯ ರಸ್ತೆಯಲ್ಲಿ ಕಾರಿನಲ್ಲಿದ್ದ ಪಿ.ಎಸ್.ಐ ರವರ ಮುಂದೆ ನಿಲ್ಲಿಸಿದ್ದು, ಪಿ.ಎಸ್.ಐ ರವರು ಸಹ ತನ್ನ ಚಿಕ್ಕಪ್ಪ ಶ್ರೀ ಲಕ್ಕಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ನಂತರ ಕಾರಿನಲ್ಲಿ ಕೂರಿಸಿಕೊಂಡು ಕರೆದುಕೊಂಡು ಹೋದರು. ಅವರು ಎಲ್ಲಿಗೆ ಕರೆದುಕೊಂಡು ಹೋದರು ನಂತರ ಏನಾಯಿತು ಎಂಬುದು ತನಗೆ ಗೊತ್ತಿರುವುದಿಲ್ಲ. ಪೀಣ್ಯ ಪೊಲೀಸ ಠಾಣೆಯ ಪೊಲೀಸರು ತನ್ನ ಚಿಕ್ಕಪ್ಪನಾದ ಶ್ರೀ ಲಕ್ಕಪ್ಪ ರವರ ಬಳಿ ಬಂದು ಬೈಯ್ದಿದ್ದನ್ನು ಒಂದು ಬಾರಿ ನೋಡಿರುತ್ತೇನ" ಎಂದು ಹೇಳಿಕೆ ನೀಡಿದ್ದು ವರದಿಯಲ್ಲಿ ಕಂಡುಬಂದಿರುತ್ತದೆ.

ಆದ್ದರಿಂದ ಶ್ರೀ ಬಿರಾಣಿ ಪಿ.ಎಸ್.ಐ ಹಾಗೂ ಶ್ರೀ ರಂಗಸ್ವಾಮಯ್ಯ ಹೆಚ್.ಸಿ-6985 ಪೀಣ್ಯ ಪೊಲೀಸ್ ಠಾಣೆ ರವರಿಗೆ ಪಿ.ಹೆಚ್.ಆರ್ ಆಕ್ಟ್ 1993 ಕಲಂ. 16ರ ಅಡಿ ಕಾರಣ ಕೇಳುವ ನೋಟೀಸು ನೀಡಿ, ಆಯೋಗದ ಮುಂದೆ ದಿನಾಂಕ 18.12.2021 ರಂದು ಮಧ್ಯಾಹ್ನ 12.00 ಗಂಟೆಗೆ ಖುದ್ದು ಹಾಜರಾಗಿ ಲಿಖಿತ ಸಮಜಾಯಿಷಿ ಸಲ್ಲಿಸುವಂತೆ ಸೂಚಿಸಿ ಹಾಗೂ ದೂರುದಾರರನ್ನು ಸಹ ವಿಚಾರಣೆ ಹಾಜರಾಗಲು ಸೂಚಿಸಿದ್ದು, ಅದರಂತೆ ಸದರಿಯವರುಗಳು ಆಯೋಗದ ಮುಂದೆ ಹಾಜರಾಗಿ ಅವರುಗಳ ಹೇಳಿಕೆಗಳನ್ನು ನೀಡಿರುತ್ತಾರೆ.

ದಿನಾಂಕ 18-12-2021 ರಂದು ದೂರುದಾರರಾದ ಶ್ರೀ ಲಕ್ಕಪ್ಪ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತಿದೆ:

> "ದಿನಾಂಕ.02.06.2020 ರಂದು ಮಧ್ಯಾಹ್ನ 2.30 ಗಂಟೆಗೆ ಪೀಣ್ಯ ಪೊಲೀಸ್ ಠಾಣೆಯ ಪಿ.ಸಿ ಶ್ರೀ ರಂಗಸ್ವಾಮಿ ಹಾಗೂ ಶ್ರೀ ಬಿರಾಣಿ ಪಿ.ಎಸ್.ಐ ರವರಿಬ್ಬರು ನಮ್ಮ ಮನೆ ಹತ್ತಿರ ಬಂದು ನಿನ್ನ ಬಾಮೈದ ಪ್ರವೀಣ್ ಎಲ್ಲಿ ಎಂದು ಕೇಳಿದರು. ಆಗ ನಾನು ಪ್ರವೀಣ್ ಎಲ್ಲಿದ್ದಾನೆ ಗೊತ್ತಿಲ್ಲವೆಂದು ಹೇಳಿದೆ. ಆಗ ಅವರು ನನ್ನನ್ನು ಅವರ ಗಾಡಿಯಲ್ಲಿ ಕೂರಿಸಿಕೊಂಡು ಪೀಣ್ಯ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಿನ್ನ ಬಾಮೈದ ಎಲ್ಲಿದ್ದಾನೆ ತೋರಿಸು ಇಲ್ಲದಿದ್ದರೆ ಆತನು ಬರುವವರೆಗೆ ನಿನ್ನನ್ನು ಬಿಡುಗಡೆ ಮಾಡುವುದಿಲ್ಲವೆಂದು ಹೇಳಿ, ಪಿ.ಸಿ ಶ್ರೀ ರಂಗಸ್ವಾಮಿ ರವರು ಪಿ.ಎಸ್.ಐ ಶ್ರೀ ಬಿರಾಣಿ ರವರತ್ತಿರ ಕರೆದುಕೊಂಡು ಹೋಗಿದ್ದು, ಅವರು ನನಗೆ ನೀನು ನಿನ್ನ ಬಾಮೈದ ರೌಡಿಗಳಾ ಎಂದು ಬೈಯ್ದು, ನನ್ನ ಕೈಗೆ ನಿನ್ನ ಬಾಮೈದ ಸಿಕ್ಕಿದರೆ ಆತನ ಕಾಲಿಗೆ ಗುಂಡು ಹಾರಿಸುತ್ತೇನೆ ಎಂದು ಹೇಳಿ, ನಿನ್ನ ಬಾಮೈದ ಪ್ರವೀಣ್‌ನ ಬಗ್ಗೆ ಮಾಹಿತಿ ಗೊತ್ತಾದರೆ ನನಗೆ ತಿಳಿಸಬೇಕೆಂದು ಹೇಳಿ ರಾತ್ರಿ 10.00 ಗಂಟೆಯವರೆಗೂ ಠಾಣೆಯಲ್ಲೇ ಕೂರಿಸಿಕೊಂಡಿದ್ದು, ನಂತರ ಸ್ಟೇಷನ್‌ನಿಂದ ಬಿಟ್ಟು ಕಳುಹಿಸಿದರು.
>
> ಅದಾದ ನಂತರ ದಿನಾಂಕ.26.07.2020ರಂದು ರಾತ್ರಿ 8.30 ಗಂಟೆಗೆ ಪೀಣ್ಯ ಪೊಲೀಸ್ ಠಾಣೆಯ ಪಿಸಿ ಶ್ರೀ ರಂಗಸ್ವಾಮಿ ಹಾಗೂ ಪಿ.ಎಸ್.ಐ ಶ್ರೀ ಬಿರಾಣಿ ರವರು ನಮ್ಮ ಮನೆ ಬಳಿ ಬಂದು ನನ್ನನ್ನು ಹೊರಗೆ ಕರೆದು, ನನ್ನ ಬಾಮೈದನ ಬಗ್ಗೆ ವಿಚಾರಿಸಿದರು, ಆಗ ನಾನು ನನಗೆ ಆತನ ಬಗ್ಗೆ ಗೊತ್ತಿಲ್ಲವೆಂದು ಹೇಳಿದರೂ ಸಹ ಏಕೆ ಪದೇ ಪದೇ ಮನೆ ಹತ್ತಿರ ಬಂದು ತೊಂದರೆ ಕೊಡುತ್ತೀದ್ದೀರಿ ಎಂದು ಹೇಳಿದ್ದಕ್ಕೆ ಪಿ.ಸಿ ಶ್ರೀ ರಂಗಸ್ವಾಮಿ ರವರು ನಿನ್ನ ಬಾಯಿಗೆ ಬೂಟನ್ನು ಹಾಕುತ್ತೇನೆಂದು ಬೈಯ್ದು, ಕಾರಿನಲ್ಲಿ ನನ್ನನ್ನು ಜಾಲಹಳ್ಳಿ ಕ್ರಾಸ್ ಮುಖ್ಯ ರಸ್ತೆಗೆ

ಕರೆದುಕೊಂಡು ಹೋಗಿ, ಅಲ್ಲೆ ಕಾರಿನಲ್ಲಿದ್ದ ಪಿ.ಎಸ್.ಐ ಶ್ರೀ ಬಿರಾಣಿ ರವರ ಮುಂದೆ ನಿಲ್ಲಿಸಿ, ಇವನು ಜೋರ್ ಜೋರ್ ಆಗಿ ಮಾತನಾಡುತ್ತಿದ್ದಾನೆ ಸಾರ್ ಎಂದು ಹೇಳಿದರು. ಆಗ ಪಿ.ಎಸ್.ಐ ಶ್ರೀ ಬಿರಾಣಿ ರವರು ಪೊಲೀಸರ ಧ್ವನಿ ಜಾಸ್ತಿ ಇರಬೇಕು, ನಿನ್ನದಲ್ಲವೆಂದು ಬೈಯ್ದು, ನಿನ್ನ ಬಾಮೈದ ಪ್ರವೀಣ್ ಸಿಕ್ಕ ಮೇಲೆ ಫೋನ್ ಮಾಡಬೇಕೆಂದು ಹೇಳಿ, ನನ್ನನ್ನು ಕಳುಹಿಸಿದರು."

ದಿನಾಂಕ 18-12-2021 ರಂದು ಶ್ರೀ ಎಂ.ಎಲ್. ಬಿರಾಣಿ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಪೀಣ್ಯ ಪೊಲೀಸ್ ಠಾಣೆ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತಿದೆ:

"ನಾನು ಪೀಣ್ಯ ಪೊಲೀಸ್ ಠಾಣೆಯಲ್ಲಿ ಒಂದು ವರ್ಷದಿಂದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ.05.06.2020 ರಂದು ಶ್ರೀ ದಾದಾಫೀರ್ ಎಂಬುವರು ಪೀಣ್ಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ದೂರಿನಲ್ಲಿ ನಾನು ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದು, ಪ್ರವೀಣ್ ಎಂಬುವರು ದಿನಾಂಕ.18.03.2020 ರಂದು ನಮ್ಮ ಅಂಗಡಿಯಲ್ಲಿ ತನ್ನ ಮೊಬೈಲ್‌ನ್ನು ರಿಪೇರಿಗೆಂದು ಕೊಟ್ಟಿದ್ದು, ಲಾಕ್‌ಡೌನ್ ಜಾರಿಯಲ್ಲಿದ್ದರಿಂದ ಸಕಾಲದಲ್ಲಿ ಮೊಬೈಲ್ ರಿಪೇರಿ ಮಾಡಿಕೊಡಲಾಗುವುದಿಲ್ಲ. ಆದರೆ ದಿನಾಂಕ.02.06.2020 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಪ್ರವೀಣ್ ನನ್ನ ಅಂಗಡಿಗೆ ಬಂದು ಮೊಬೈಲ್ ಕೊಡುವಂತೆ ಕೇಳಿದ್ದು, ಮೊಬೈಲ್ ಇನ್ನು ರಿಪೇರಿಯಾಗಿಲ್ಲವೆಂದು ಹೇಳಿದಾಗ ಏಕಾಏಕಿ ಜಗಳ ತೆಗೆದು ನನಗೆ ಹೊಡೆದಿರುತ್ತಾನೆಂದು ಆದ್ದರಿಂದ ಪ್ರವೀಣ್‌ನನ್ನು ಕರೆಯಿಸಿ ವಿಚಾರಣೆ ಮಾಡಿ ಸೂಕ್ತ ಬಂದೋಬಸ್ತ್ ಮಾಡಬೇಕೆಂದು ಕೊಟ್ಟ ದೂರನ್ನು ಪೀಣ್ಯ ಪೊಲೀಸ್ ಠಾಣೆಯ ಅಂದಿನ ಇನ್‌ಚಾರ್ಜ್ ಎಸ್.ಹೆಚ್.ಓ ರಾದ ಶ್ರೀ ಗೋವರ್ಧನರಾಜು ಎಎಸ್‌ಐ ರವರು ಪಡೆದು ಠಾಣಾ ಎನ್.ಸಿ.ಆರ್ ನಂ.361/2020ರಲ್ಲಿ ನಮೂದಿಸಿರುತ್ತಾರೆ.

ಈ ವಿಷಯದ ಬಗ್ಗೆ ಠಾಣಾಧಿಕಾರಿಗಳು ನನಗೆ ಮತ್ತು ಅಪರಾಧ ವಿಭಾಗದ ಸಿಬ್ಬಂದಿಯಾದ ಹೆಚ್.ಸಿ.6985 ಶ್ರೀ ರಂಗಸ್ವಾಮಿರವರಿಗೆ ಆರೋಪಿ ಪ್ರವೀಣ್‌ನ ಮೇಲೆ ಈಗಾಗಲೇ ರೌಡಿ ಹಾಳೆ ಇದ್ದು, ಈತನು ಪದೇ ಪದೇ ಗಲಾಟೆ ಮಾಡುತ್ತಿದ್ದಾನೆ ಹಾಗೂ ರೌಡಿ ಹಾಳೆ ತೆರೆದಾಗಿನಿಂದ ಓ.ವಿ(ತಲೆಮರೆಸಿಕೊಂಡ ರೌಡಿ ಆಸಾಮಿ) ಆಸಾಮಿಯೆಂದು ಈತನನ್ನು ಚೆಕ್ ಮಾಡಿ ಕರೆದುಕೊಂಡು ಬಂದು ಈತನ ವಿರುದ್ಧ ಭದ್ರತಾ ಪ್ರಕರಣವನ್ನು ದಾಖಲಿಸುವಂತೆ ಸೂಚಿಸಿದ ಮೇರೆಗೆ ನಾನು ಮತ್ತು ಹೆಚ್‌ಸಿ-6985 ಶ್ರೀ ರಂಗಸ್ವಾಮಿ ರವರು ಸದರಿ ರೌಡಿಪಟ್ಟಿಯಲ್ಲಿ ನೀಡಿರುವ ವಿಳಾಸಕ್ಕೆ ದಿನಾಂಕ.26.07.2020ರಂದು ಹೋಗಿ ನೋಡಲಾಗಿ, ಸದರಿ ವಿಳಾಸದಲ್ಲಿ ಲಕ್ಕಪ್ಪ ಎಂಬುವವರು ವಾಸವಿದ್ದು, ಸದರಿಯವರನ್ನು ಪ್ರವೀಣ್‌ನ ಬಗ್ಗೆ ವಿಚಾರ ಮಾಡಲಾಗಿ ಆತನು ತನ್ನ ಬಾಮೈದ ಆತನು ನಮ್ಮ ಮನೆಯಲ್ಲಿ ವಾಸವಿಲ್ಲ, ಆತ ಎಲ್ಲಿ ಇದ್ದಾನೆ ಗೊತ್ತಿಲ್ಲವೆಂದು ನಮ್ಮಗಳ ಮೇಲೆ ಜೋರಾಗಿ ಕೂಗಾಡಿ ಪ್ರವೀಣನಿಗೂ ನನಗೂ ಯಾವುದೇ ಸಂಬಂಧವಿಲ್ಲ ನಮ್ಮ ಮನೆಯ ಬಳಿ ಬರಬೇಡಿ ಎಂದು ಹೇಳಿದರು. ಆಗ ನಾನು ಪ್ರವೀಣನ ಬಗ್ಗೆ ಮಾಹಿತಿ ಗೊತ್ತಾದಲ್ಲಿ ಠಾಣೆಗೆ ತಿಳಿಸುವಂತೆ ಹೇಳಿ ವಾಪಸ್ ಬಂದಿರುತ್ತೇನೆ. ಅವರಿಗೆ ಯಾವುದೇ ರೀತಿಯ ಅವಾಚ್ಯ ಶಬ್ದಗಳಿಂದ ಬೈಯ್ದಿರುವುದಿಲ್ಲ. ದೂರುದಾರರು ದೂರಿನಲ್ಲಿ ಆರೋಪಿಸಿರುವಂತೆ ದಿನಾಂಕ.02.06.2020 ರಂದು ಮಧ್ಯಾಹ್ನ 2.30 ಗಂಟೆಗೆ ನಾನಾಗಲೀ ನನ್ನ ಸಿಬ್ಬಂದಿ ಹೆಚ್‌ಸಿ-6985 ಶ್ರೀ ರಂಗಸ್ವಾಮಿರವರಾಗಲೀ ಅವರ ಮನೆ ಬಳಿ ಹೋಗಿ ಅವರನ್ನು ಠಾಣೆಗೆ ಕರೆದುಕೊಂಡು ಬಂದಿರುವುದಿಲ್ಲ. ಅವರು ಮಾಡಿರುವ ಆರೋಪ

ಸತ್ಯಕ್ಕೆ ದೂರವಾಗಿರುತ್ತದೆ. ಅವರ ಬಾಮ್ಮೈದನ ಬಗ್ಗೆ ಮಾಹಿತಿ ನೀಡುವಂತೆ ಕೇಳಿದ್ದಕ್ಕೆ ನಮ್ಮಗಳ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ.

ದೂರುದಾರರ ಬಾಮ್ಮೈದ ಪ್ರವೀಣ್ ರೌಡಿ ಆಸಾಮಿಯಾಗಿದ್ದು, ಈತನ ವಿರುದ್ಧ ಈ ಹಿಂದೆ ನಮ್ಮ ಪೊಲೀಸ್ ಠಾಣಾ ಮೊ.ಸಂ.485/2018 ಕಲಂ 143, 147, 148, 307 ರೆ/ವಿ 149 ಐಪಿಸಿ ರೀತ್ಯ ದಾಖಲಾಗಿ ಪ್ರಕರಣದಲ್ಲಿ ಆರೋಪಿಯನ್ನು ದಸ್ತಗಿರಿ ಮಾಡುವ ಕಾಲದಲ್ಲಿ ಹಾಗೂ ರೌಡಿ ಹಾಳೆಯನ್ನು ತೆರೆಯುವ ಸಮಯದಲ್ಲಿ್ಲ ದೂರುದಾರರು ನೀಡಿರುವ ದೂರರ್ಜಿಯಲ್ಲಿ ವಿಳಾಸ ನಂ.664, 2ನೇ ಕ್ರಾಸ್, ವಿವೇಕಾನಂದ ನಗರ, ಜಾಲಹಳ್ಳಿ ಕ್ರಾಸ್, ಬೆಂಗಳೂರು-560058 ವಿಳಾಸವನ್ನು ನೀಡಿರುತ್ತಾರೆ. ರೌಡಿ ಆಸಾಮಿ ಪ್ರವೀಣ್‌ನನ್ನು ತಪಾಸಣೆ ಮಾಡಿದಾಗ ದೂರುದಾರರು ಸದರಿ ವಿಳಾಸದಲ್ಲಿ ವಾಸವಿರುವುದು ಕಂಡು ಬಂದಿರುತ್ತದೆ. ನಾವು ರೌಡಿ ಆಸಾಮಿಯನ್ನು ತಪಾಸಣೆ ಮಾಡಲು ಹೋಗಿರುತ್ತೇವೆಯೇ ಹೊರತು ದೂರುದಾರರಿಗೆ ಯಾವುದೇ ರೀತಿಯಲ್ಲಿ ತೊಂದರೆ ಕೊಟ್ಟಿರುವುದಿಲ್ಲ. ಆದರೆ ದೂರುದಾರರು ಪೊಲೀಸರು, ನಮ್ಮ ಮನೆ ಹತ್ತಿರ ಬರಬಾರದು ಮತ್ತು ಆರೋಪಿಯನ್ನು ರಕ್ಷಿಸುವ ಉದ್ದೇಶದಿಂದ ನಮ್ಮ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಹಿರಿಯ ಅಧಿಕಾರಿಗಳ ಕಛೇರಿಗಳಿಗೆ ದೂರು ಅರ್ಜಿಯನ್ನು ನೀಡಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು, ಯಶವಂತಪುರ ಉಪವಿಭಾಗ ರವರು ನಮ್ಮನ್ನು ವಿಚಾರಣೆ ಮಾಡಿ ಸುದೀರ್ಘ ವರದಿಯನ್ನು ಸಲ್ಲಿಸಿರುತ್ತಾರೆ.

ದೂರುದಾರರಾದ ಶ್ರೀ ಲಕ್ಕಪ್ಪ ರವರು ಸ್ಥಳೀಯ ಮುಖಂಡರಾಗಿದ್ದು, ಠಾಣಾ ಸರಹದ್ದಿನಲ್ಲಿ ಅವರು ನಡೆಸುವ ಚಟುವಟಿಕೆಗಳಿಗೆ ಪೊಲೀಸರು ಸಹಾಯ ಮಾಡುವುದಿಲ್ಲವೆಂದು ಮತ್ತು ತನ್ನ ಬಾಮ್ಮೈದ ಹಾಗೂ ರೌಡಿಪಟ್ಟಿ ಆಸಾಮಿಯಾದ ಪ್ರವೀಣ್ ಎಂಬುವನ ರೌಡಿ ಚಟುವಟಿಕೆಗಳನ್ನು ನಿಯಂತ್ರಿಸುವ ಬಗ್ಗೆ ಪೊಲೀಸರು ಕಾನೂನು ರೀತ್ಯ ಕ್ರಮ ಕೈಗೊಳ್ಳುತ್ತಾರೆಂಬ ದುರುದ್ದೇಶದಿಂದ ಆತನನ್ನು ರಕ್ಷಿಸಿಕೊಳ್ಳುವ ಸಲುವಾಗಿ ಮತ್ತು ಪೊಲೀಸ್ ಸಿಬ್ಬಂದಿಗಳನ್ನು ದುರ್ಬಲರನ್ನಾಗಿ ಮಾಡುವ ಉದ್ದೇಶದಿಂದ ಇಲ್ಲಸಲ್ಲದ ಆರೋಪಗಳನ್ನು ಮಾಡಿ ದೂರು ಅರ್ಜಿಯನ್ನು ನೀಡಿರುತ್ತಾರೆ ಮತ್ತು ಪ್ರಕರಣದಲ್ಲಿ ತನ್ನ ಸಂಬಂಧಿಯವರಾದ ಕುಮಾರ್(ತಮ್ಮನ ಮಗ)ರವರನ್ನೇ ಉದ್ದೇಶಪೂರ್ವಕವಾಗಿ ಸಾಕ್ಷಿದಾರರನ್ನಾಗಿ ಮಾಡಿ ವಿಚಾರಣೆಯಲ್ಲಿ ಹಾಜರುಪಡಿಸಿದ್ದು ಸರಿಯಷ್ಟೆ.

ಪ್ರತ್ಯಕ್ಷ ಸಾಕ್ಷಿಯಾದ ಶ್ರೀ ಕುಮಾರ್ ರವರು ಆಯೋಗದ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ದೂರುದಾರರ ಜೊತೆಯಲ್ಲಿ ವಾಸವಾಗಿರುತ್ತೇನೆ, ನಮ್ಮ ಚಿಕ್ಕಪ್ಪನ ಮನೆಯ ಹತ್ತಿರ ಇರುವಾಗ್ಗೆ ಈಗ್ಗೆ ಸುಮಾರು 6 ತಿಂಗಳ ಹಿಂದೆ ನನ್ನ ಚಿಕ್ಕಮ್ಮನ ಮನೆ ಹತ್ತಿರ ಹೋಗಿದ್ದಾಗ ಪೀಣ್ಯ ಪೋಲಿಸ್ ಠಾಣೆಯ ಪೊಲೀಸರಾದ ಶ್ರೀ ರಂಗಸ್ವಾಮಿ ರವರು ಬೆಳಿಗ್ಗೆ ಸುಮಾರು 10.30 ಗಂಟೆಯಿಂದ 11.00 ಗಂಟೆ ಸಮಯದಲ್ಲಿ ನನ್ನ ಚಿಕ್ಕಪ್ಪ ಶ್ರೀ ಲಕ್ಕಪ್ಪನವರ ಮನೆ ಬಳಿ ಬಂದು ಅವರನ್ನು ಮನೆಯಿಂದ ಹೊರಗೆ ಕರೆದು ನಿನ್ನ ಭಾಮ್ಮೈದ ಪ್ರವೀಣ್ ಎಲ್ಲಿ ಇದ್ದಾನೆ ತೋರಿಸು ಎಂದು ಹೇಳಿದರು. ಆಗ ಅವರು ನನ್ನ ಬಾಮ್ಮೈದ ನನ್ನ ಮನೆಯಲ್ಲಿ ಇಲ್ಲ, ಆತನು ಎಲ್ಲಿ ಇದ್ದಾನೆ ನನಗೆ ಗೊತ್ತಿಲ್ಲ ಮನೆ ಹತ್ತಿರ ಏಕೆ ಪದೆ ಪದೇ ಬರುತ್ತೀರ ಎಂದು ಹೇಳಿದರು ಎಂದು ಆಗ ರಂಗಸ್ವಾಮಿ ರವರು ನನ್ನ ಚಿಕ್ಕಪ್ಪನಿಗೆ ಬೈದರು, ನಂತರ ಜಾಲಹಳ್ಳಿ ಕ್ರಾಸ್‌ನಲ್ಲಿ ಕಾರಿನಲ್ಲಿದ್ದ ಪಿ.ಎಸ್.ಐ ರವರು ಸಾರ್ವಜನಿಕವಾಗಿ ಬೈದರು ಎಂದು ಹೇಳಿಕೆ ನೀಡಿದ್ದು ಸರಿಯಷ್ಟೆ. ಆದರೆ ದೂರುದಾರರಾದ ಶ್ರೀ ಲಕ್ಕಪ್ಪನವರು ತಮ್ಮ ಮೂಲ ಅರ್ಜಿಯಲ್ಲಿ ಹಾಗೂ ಪ್ರತ್ಯಕ್ಷ ಸಾಕ್ಷಿದಾರರು

ಶ್ರೀ ಕುಮಾರ್ ರವರು ತಮ್ಮ ಹೇಳಿಕೆಯಲ್ಲಿ ಹೇಳಿರುವ ಸಮಯಕ್ಕೂ ಹಾಗೂ ದೂರರ್ಜಿಯಲ್ಲಿ ಹೇಳಿರುವ ಸಮಯಕ್ಕೂ ಒಂದಕ್ಕೊಂದು ತಾಳೆಯಾಗಿರುವುದಿಲ್ಲದಿರುವುದು ಕಂಡು ಬಂದಿರುತ್ತದೆ. ಅರ್ಜಿದಾರರು ಶ್ರೀ ಲಕ್ಕಪ್ಪ ರವರು ಸುಳ್ಳು ದೂರು ಅರ್ಜಿ ನೀಡಿದ್ದು ಹಾಗೂ ಪ್ರತ್ಯಕ್ಷ ಸಾಕ್ಷಿಯಾಗಿ ಶ್ರೀ ಕುಮಾರ್ ರವರು ಅದಕ್ಕೆ ಸಂಬಂಧಿಸಿದಂತೆ ಸುಳ್ಳು ಹೇಳಿಕೆ ನೀಡಿರುವುದು ಕಂಡು ಬಂದಿರುತ್ತದೆ. ಈ ರೀತಿಯಾಗಿ ದುರುದ್ದೇಶಪೂರ್ವಕವಾಗಿ ಆಯೋಗದ ಮುಂದೆ ಹೇಳಿಕೆ ನೀಡಿ ಆಯೋಗದ ಸಮಯವನ್ನು ವ್ಯರ್ಥ ಮಾಡಿದ್ದಲ್ಲದೇ ಹಾಗೂ ಪೊಲೀಸ್ ಸಿಬ್ಬಂದಿಯವರ ಮಾನಸಿಕ ಸ್ಥೈರ್ಯವನ್ನು ಕುಗ್ಗಿಸುವ ಸಲುವಾಗಿ ಈ ರೀತಿ ದೂರುದಾರರು ಹಾಗೂ ಸಾಕ್ಷಿದಾರರು ಅರ್ಜಿ ನೀಡಿದ್ದು ಇದು ಸತ್ಯಕ್ಕೆ ದೂರವಾಗಿರುತ್ತದೆ

ಶ್ರೀ ಬಿರಾಣಿ ಪಿ.ಎಸ್.ಐ ರವರಿಗೆ, ಆಯೋಗವು ಠಾಣೆಯಲ್ಲಿ ದಿನಾಂಕ.02.06.2020 ರಂದು ಸಿಸಿಟಿವಿ ಅಳವಡಿಸಿರುವ ಬಗ್ಗೆ ಫೂಟೇಜ್ ಕೇಳಲಾಗಿ, ಅವರು ನಮ್ಮ ಠಾಣೆಯಲ್ಲಿ ಲಾಕಪ್‌ಸೆಲ್ ಬಿಟ್ಟು ಬೇರೆ ಕಡೆ ಸಿಸಿಟಿವಿ ಹಾಕಿಲ್ಲವೆಂದು ತಿಳಿಸಿದರು. ಲಾಕಪ್‌ಸೆಲ್‌ಯಲ್ಲಿರುವ ಸಿಸಿಟಿವಿ ಕ್ಯಾಮೆರ ರಿಪೇರಿಯಲ್ಲಿದೆ ಎಂದು ಹೇಳಿದ್ದಾರೆ."

ದಿನಾಂಕ 18-12-2021 ರಂದು ಅಂದಿನ ಪೀಣ್ಯ ಪೊಲೀಸ್ ಠಾಣೆಯ ಪೊಲೀಸ್ ಕಾನ್‌ಸ್ಟೇಬಲ್ ಆದ ಶ್ರೀ ರಂಗಸ್ವಾಮಯ್ಯ, ಹಾಲಿ ಹೆಚ್.ಸಿ-6985, ನಂದಿನಿ ಲೇಔಟ್ ಪೊಲೀಸ್ ಠಾಣೆ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತಿದೆ:

"ನಾನು 2012 ರಿಂದ 2016ರವರೆಗೂ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ಬಡ್ತಿ ಹೊಂದಿ ಕೊಡಿಗೆಹಳ್ಳಿ ಪೊಲೀಸ್ ಠಾಣೆಗೆ ಹೋಗಿ, ಪುನ: 2018ಕ್ಕೆ ಪೀಣ್ಯ ಪೊಲೀಸ್ ಠಾಣೆಗೆ ವಾಪಸ್ ಬಂದು ಕರ್ತವ್ಯ ನಿರ್ವಹಿಸಿ, ನಂತರ ದಿನಾಂಕ.04.08.2021 ರಿಂದ ಹಾಲಿ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಹೆಡ್‌ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ.05.06.2020ರಂದು ಶ್ರೀ ದಾದಾಫೀರ್ ಎಂಬುವರು ಪೀಣ್ಯ ಪೊಲೀಸ್ ಠಾಣೆಗೆ ಹಾಜರಾಗಿ ನಾನು ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದೇನೆ. ಶ್ರೀ ಪ್ರವೀಣ್ ಎಂಬುವರು ದಿನಾಂಕ.18.03.2020 ರಂದು ನಮ್ಮ ಅಂಗಡಿಯಲ್ಲಿ ತನ್ನ ಮೊಬೈಲ್‌ನ್ನು ರಿಪೇರಿಗೆಂದು ಕೊಟ್ಟಿದ್ದು, ಲಾಕ್‌ಡೌನ್ ಇದ್ದುದರಿಂದ ಸಕಾಲದಲ್ಲಿ ಮೊಬೈಲ್ ಅನ್ನು ರಿಪೇರಿ ಮಾಡಿಕೊಡಲಾಗಿರುವುದಿಲ್ಲ. ಆದರೆ ದಿನಾಂಕ.02.06.2020 ರಂದು ಸಂಜೆ 06.30 ಗಂಟೆ ಸಮಯದಲ್ಲಿ ಪ್ರವೀಣ್ ನನ್ನ ಅಂಗಡಿಗೆ ಬಂದು ಮೊಬೈಲ್ ಕೊಡುವಂತೆ ಕೇಳಿದ್ದು, ಮೊಬೈಲ್ ಇನ್ನು ರಿಪೇರಿಯಾಗಿಲ್ಲವೆಂದು ಹೇಳಿದಾಗ ಏಕಾಏಕಿ ನನಗೆ ಹೊಡೆದಿರುತ್ತಾನೆ. ಆದ್ದರಿಂದ ಪ್ರವೀಣ್ ನನ್ನು ಕರೆಯಿಸಿ ಸೂಕ್ತ ಬಂದೋಬಸ್ತ್ ಮಾಡಬೇಕೆಂದು ಕೊಟ್ಟ ದೂರನ್ನು ಠಾಣೆ ಉಸ್ತುವಾರಿಯಲ್ಲಿದ್ದ ಶ್ರೀ ಗೋವರ್ಧನ್‌ರಾಜು, ಎಎಸ್‌ಐ ರವರು ಪಡೆದು ಠಾಣಾ ಎನ್.ಸಿ.ಆರ್ 361/2020ರಲ್ಲಿ ನಮೂದಿಸಿರುತ್ತಾರೆ. ಈ ಬಗ್ಗೆ ಠಾಣಾಧಿಕಾರಿಗಳು ನನಗೆ ಮತ್ತು ಪಿ.ಎಸ್.ಐ ಶ್ರೀ ಬಿರಾಣಿರವರಿಗೆ ಆರೋಪಿ ಪ್ರವೀಣ್‌ನ ಮೇಲೆ ಈಗಾಗಲೇ ರೌಡಿ ಹಾಳೆಯಿದೆ. ಈತನು ಪದೇ ಪದೇ ಗಲಾಟೆಯನ್ನು ಮಾಡುತ್ತಿದ್ದಾನೆ. ಈತನನ್ನು ಚೆಕ್ ಮಾಡಿ ಬನ್ನಿ ಎಂದು ತಿಳಿಸಿದ ಮೇರೆಗೆ ನಾನು ಮತ್ತು ಪಿ.ಎಸ್.ಐ ಶ್ರೀ ಬಿರಾಣಿ ರವರು ದಿನಾಂಕ.26.07.2020 ರಂದು ಪ್ರವೀಣ್ ಎಂಬುವನು ರೌಡಿಪಟ್ಟಿಯಲ್ಲಿ ನೀಡಿರುವ ವಿಳಾಸವಾದ ನಂ.664, 2ನೇ ಅಡ್ಡರಸ್ತೆ, ವಿವೇಕಾನಂದನಗರ, ಜಾಲಹಳ್ಳಿ ಕ್ರಾಸ್, ಬೆಂಗಳೂರು-560058 ವಿಳಾಸಕ್ಕೆ ಹೋಗಿ

ನೋಡಲಾಗಿ, ಈ ವಿಳಾಸದಲ್ಲಿ ಶ್ರೀ ಲಕ್ಕಪ್ಪ ನವರು ವಾಸವಿದ್ದು, ರೌಡಿಪಟ್ಟಿ ಆಸಾಮಿಯಾದ ಪ್ರವೀಣ್ ಎಂಬುವನ ಬಗ್ಗೆ ವಿಚಾರ ಮಾಡಲಾಗಿ, ಆತನು ತನ್ನ ಬಾಮ್ಮೈದ, ಆತನು ನಮ್ಮ ಮನೆಯಲ್ಲಿ ವಾಸವಾಗಿರುವುದಿಲ್ಲ. ಈಗ ಎಲ್ಲಿದ್ದಾನೆ ಗೊತ್ತಿಲ್ಲ, ಪದೇ ಪದೇ ನಮ್ಮ ಮನೆ ಬಳಿ ನೀವು ಏಕೆ ಬರುತ್ತೀರಿ ಎಂದು ಸಾರ್ವಜನಿಕವಾಗಿ ಏರು ಧ್ವನಿಯಲ್ಲಿ ನಮ್ಮಗಳ ಮೇಲೆ ಕೂಗಾಡಿ ಪ್ರವೀಣನಿಗೂ ನನಗೂ ಯಾವುದೇ ಸಂಬಂಧವಿಲ್ಲ ನಮ್ಮ ಮನೆಯ ಬಳಿ ಬರಬೇಡಿ ಎಂದು ಹೇಳಿದರು. ಆಗ ನಮ್ಮ ಪಿ.ಎಸ್.ಐ ರವರಾದ ಶ್ರೀ ಎಂ.ಎಲ್ ಬಿರಾಣಿ ರವರು ಪ್ರವೀಣ್‌ನ ಬಗ್ಗೆ ಮಾಹಿತಿ ಗೊತ್ತಾದಲ್ಲಿ ಠಾಣೆಗೆ ತಿಳಿಸುವಂತೆ ಹೇಳಿ ನನ್ನನ್ನು ಕರೆದುಕೊಂಡು ಠಾಣೆಗೆ ವಾಪಸ್ ಬಂದರು.

ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿರುವಂತೆ ನಾವು ಅವರಿಗೆ ಯಾವುದೇ ರೀತಿಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುವುದಾಗಲೀ, ಬೆದರಿಕೆ ಹಾಕುವುದಾಗಲೀ ಮಾಡಿರುವುದಿಲ್ಲ. ದೂರುದಾರರು ದೂರಿನಲ್ಲಿ ಆರೋಪಿಸಿರುವಂತೆ ದಿನಾಂಕ.02.06.2020 ರಂದು ಮಧ್ಯಾಹ್ನ 2-30 ಗಂಟೆಗೆ ನಾನಾಗಲೀ ನಮ್ಮ ಪಿ.ಎಸ್.ಐ ರವರಾಗಲೀ ಅವರ ಮನೆ ಬಳಿ ಹೋಗಿರುವುದಿಲ್ಲ ಅವರನ್ನು ಠಾಣೆಗೆ ಕರೆದುಕೊಂಡು ಬಂದಿರುವುದಿಲ್ಲ. ಅವರು ನಮ್ಮ ಮೇಲೆ ಆರೋಪಿಸಿ ನೀಡಿರುವ ದೂರು ಸತ್ಯಕ್ಕೆ ದೂರವಾಗಿರುತ್ತದೆ.

ಪ್ರವೀಣ್ ಒಬ್ಬ ಪೀಣ್ಯ ಪೊಲೀಸ್ ಠಾಣೆಯ ರೌಡಿ ಆಸಾಮಿಯಾಗಿದ್ದು, ಈತನ ವಿರುದ್ಧ ಈ ಹಿಂದೆ ದಾಖಲಾಗಿದ್ದ ಪ್ರಕರಣದಲ್ಲಿ ದಸ್ತಗಿರಿ ಮಾಡಿದಾಗ ಮತ್ತು ರೌಡಿಪಟ್ಟಿಯನ್ನು ತೆರೆಯುವ ಸಮಯದಲ್ಲಿ ದೂರುದಾರರ ವಿಳಾಸವಾದ ನಂ.664, 2ನೇ ಅಡ್ಡರಸ್ತೆ, ವಿವೇಕಾನಂದ ನಗರ, ಜಾಲಹಳ್ಳಿ ಕ್ರಾಸ್, ಬೆಂಗಳೂರು-560058 ವಿಳಾಸವನ್ನು ನೀಡಿರುತ್ತಾನೆ. ರೌಡಿ ಆಸಾಮಿ ಪ್ರವೀಣ್‌ನನ್ನು ತಪಾಸಣೆ ಮಾಡಲು ಹೋದಾಗ ಶ್ರೀ ಲಕ್ಕಪ್ಪ ನವರು ವಾಸವಿರುವುದು ಕಂಡು ಬಂದಿರುತ್ತದೆ. ನಮ್ಮ ಪೊಲೀಸ್ ಇಲಾಖೆಯ ಮೇಲಾಧಿಕಾರಿಗಳು ನೀಡಿರುವ ನಿರ್ದೇಶನ ಮತ್ತು ಆದೇಶದ ಮೇರೆಗೆ ನಮ್ಮ ಪ್ರತಿನಿತ್ಯದ ರೌಡಿ ಹಾಜರಿರುವ ತಪಾಸಣಾ ಕರ್ತವ್ಯವನ್ನು ನಿರ್ವಹಿಸುವ ಸಲುವಾಗಿ ರೌಡಿ ಪಟ್ಟಿ ಆಸಾಮಿಯ ವಿಳಾಸಕ್ಕೆ ಹೋಗಿರುತ್ತೇವೆ ವಿನ: ದೂರುದಾರರಿಗೆ ಯಾವುದೇ ರೀತಿಯಾಗಿ ತೊಂದರೆ ಕೊಡಲು ಹೋಗಿರುವುದಿಲ್ಲ.

ಪ್ರಕರಣದ ದೂರುದಾರರು ತನ್ನ ಬಾಮ್ಮೈದ ಶ್ರೀ ಪ್ರವೀಣ್‌ನನ್ನು ರಕ್ಷಿಸುವ ಉದ್ದೇಶದಿಂದ ಮತ್ತು ರೌಡಿ ಚಟುವಟಿಕೆಗಳಲ್ಲಿ ನಿರತನಾಗಿರುವ ತನ್ನ ಬಾಮ್ಮೈದನ ವಿರುದ್ಧ ಪೊಲೀಸರು ಕಾನೂನು ರೀತ್ಯ ಕ್ರಮ ಕೈಗೊಳ್ಳುತ್ತಾರೆಂಬ ಉದ್ದೇಶದಿಂದ ನಮ್ಮ ವಿರುದ್ಧ ಇಲ್ಲ-ಸಲ್ಲದ ಆರೋಪಗಳನ್ನು ಮಾಡಿ ದೂರರ್ಜಿಗಳನ್ನು ನೀಡುತ್ತಾ ಬಂದಿರುತ್ತಾರೆ. ಈ ದೂರು ಅರ್ಜಿಗಳಿಗೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು, ಯಶವಂತಪುರ ಉಪವಿಭಾಗ ರವರು ನಮ್ಮನ್ನು ವಿಚಾರಣೆ ಮಾಡಿದ್ದು, ಮೇಲ್ಕಂಡ ವಿವರವಾದ ಮಾಹಿತಿಯನ್ನು ಮತ್ತು ಹೇಳಿಕೆಯನ್ನು ಮಾನ್ಯರಲ್ಲಿ ನಿವೇದಿಸಿಕೊಂಡಿರುತ್ತೇನೆ.

ದೂರುದಾರರು ದೂರಿನಲ್ಲಿ ನಾನು 10-12 ವರ್ಷಗಳಿಂದ ಪೀಣ್ಯ ಪೊಲೀಸ್ ಠಾಣೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು ಆರೋಪಿಸಿದ್ದು, ನಾನು ಪೀಣ್ಯ ಪೊಲೀಸ್ ಠಾಣೆಯಲ್ಲಿ 2012 ರಿಂದ 2016 ರವರೆಗೆ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನಂತರ 2016 ರಿಂದ 2018ರವರೆಗೆ ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ 2018ರಿಂದ ಪೀಣ್ಯ ಪೊಲೀಸ್ ಠಾಣೆಗೆ

ವರ್ಗಾವಣೆಯಾಗಿದ್ದು, ಈಗ ಸದರಿ ದಿನಾಂಕ.04.08.2021 ರಿಂದ ಹಾಲಿ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದೂರುದಾರರಾದ ಶ್ರೀ ಲಕ್ಕಪ್ಪ ನವರು ಸ್ಥಳೀಯ ಡಿ.ಎಸ್.ಎಸ್ ಮುಖಂಡರಾಗಿದ್ದು, ಠಾಣಾ ಸರಹದ್ದಿನಲ್ಲಿ ಅವರು ನಡೆಸುವ ಚಟುವಟಿಕೆಗಳಿಗೆ ಪೊಲೀಸರು ಸಹಾಯ ಮಾಡುವುದಿಲ್ಲವೆಂದು ಮತ್ತು ತನ್ನ ಭಾಮೈದ ಹಾಗೂ ರೌಡಿಪಟ್ಟಿ ಆಸಾಮಿಯಾದ ಪ್ರವೀಣ್ ಎಂಬುವನ ರೌಡಿ ಚಟುವಟಿಕೆಗಳನ್ನು ನಿಯಂತ್ರಿಸುವ ಬಗ್ಗೆ ಪೊಲೀಸರು ಕಾನೂನು ರೀತ್ಯ ಕ್ರಮ ಕೈಗೊಳ್ಳಬಾರದೆಂಬ ದುರುದ್ದೇಶದಿಂದ, ತನ್ನ ಭಾಮೈದನನ್ನು ರಕ್ಷಿಸುವ ಸಲುವಾಗಿ ಹಾಗೂ ಪೊಲೀಸ್ ಸಿಬ್ಬಂದಿಗಳನ್ನು ದುರ್ಬಲರನ್ನಾಗಿ ಮಾಡುವ ಉದ್ದೇಶದಿಂದ ಇಲ್ಲಸಲ್ಲದ ಆರೋಪಗಳನ್ನು ಮಾಡಿ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಹಾಗೂ ಪ್ರಕರಣದಲ್ಲಿ ತನ್ನ ಸಂಬಂಧಿಯಾದ ತನ್ನ ತಮ್ಮನ ಮಗ ಶ್ರೀ ಕುಮಾರ್‌ನನ್ನೇ ಉದ್ದೇಶಪೂರ್ವಕವಾಗಿ ಸಾಕ್ಷಿದಾರರನ್ನಾಗಿ ಮಾಡಿ ವಿಚಾರಣೆಯಲ್ಲಿ ಹಾಜರುಪಡಿಸಿ ನಮ್ಮ ವಿರುದ್ಧ ಷಡ್ಯಂತ್ರವನ್ನು ರಚಿಸಿರುವುದು ಕಂಡು ಬಂದಿರುತ್ತದೆ. ಆದುದರಿಂದ ದೂರುದಾರರು ನಮ್ಮ ವಿರುದ್ಧ ಮಾಡಿರುವ ಆರೋಪಗಳೆಲ್ಲವೂ ಸತ್ಯಕ್ಕೆ ದೂರವಾಗಿದ್ದು, ಮೇಲ್ಕಂಡ ಎಲ್ಲಾ ಅಂಶಗಳನ್ನು ಆಧರಿಸಿ ನನ್ನ ವಿರುದ್ಧ ಮಾಡಿರುವ ದೋಷಾರೋಪಣೆಯಿಂದ ನನ್ನನ್ನು ಮುಕ್ತನನ್ನಾಗಿ ಮಾಡಬೇಕೆಂದು ಕೋರುತ್ತೇನೆ."

ಮುಂದುವರೆದು, ಪ್ರತ್ಯಕ್ಷ ಸಾಕ್ಷಿದಾರರಾದ ಶ್ರೀ ಕುಮಾರ್ ರವರೊಂದಿಗೆ ದೂರುದಾರರು, ಪಿ.ಎಸ್.ಐ. ಶ್ರೀ ಬಿರಾಣಿ ಹಾಗೂ ಶ್ರೀ ರಂಗಸ್ವಾಮಿ ಹೆಚ್.ಸಿ.–6985 ರವರು ದಿನಾಂಕ 05.02.2022 ರಂದು ಆಯೋಗದ ಮುಂದೆ ಹಾಜರಾಗಲು ಸೂಚಿಸಿದ್ದು, ಪ್ರತ್ಯಕ್ಷ ಸಾಕ್ಷಿದಾರರಾದ ಶ್ರೀ ಕುಮಾರ್ ರವರನ್ನು ಹೊರತುಪಡಿಸಿ ದೂರುದಾರರಾದ ಶ್ರೀ ಲಕ್ಕಪ್ಪ, ಪಿ.ಎಸ್.ಐ. ಶ್ರೀ ಬಿರಾಣಿ ಹಾಗೂ ಶ್ರೀ ರಂಗಸ್ವಾಮಿ ಹೆಚ್.ಸಿ.–6985 ರವರು ಆಯೋಗದ ಮುಂದೆ ಹಾಜರಾಗಿರುತ್ತಾರೆ ದೂರುದಾರರಾದ ಶ್ರೀ ಲಕ್ಕಪ್ಪ ರವರು ಶ್ರೀ ಕುಮಾರ್ ರವರನ್ನು ಆಯೋಗದ ಮುಂದೆ ಹಾಜರುಪಡಿಸದೆ ಇರುವುದರಿಂದ ಮತ್ತೊಂದು ದಿನಾಂಕವನ್ನು ನೀಡಿದ್ದು, ದಿನಾಂಕ 21.02.2022 ರಂದು ಸಹ ಶ್ರೀ ಲಕ್ಕಪ್ಪ ರವರು ಪ್ರತ್ಯಕ್ಷ ಸಾಕ್ಷಿದಾರರಾದ ಶ್ರೀ ಕುಮಾರ್ ರವರನ್ನು ಆಯೋಗದ ಮುಂದೆ ವಿಚಾರಣೆಗಾಗಿ ಹಾಜರುಪಡಿಸಿರುವುದಿಲ್ಲ. ಆದರೆ, ಪ್ರತ್ಯಕ್ಷ ಸಾಕ್ಷಿದಾರರಾದ ಶ್ರೀ ಕುಮಾರ್ ರವರು ದಿನಾಂಕ 08–04–2021 ರಂದು ಆಯೋಗದ ಡಿ.ವೈ.ಎಸ್.ಪಿ ಶ್ರೀ ಕೆ.ಇ. ಕೇಶವ್ ರವರ ಮುಂದೆ ಖುದ್ದು ಹಾಜರಾಗಿ ಅವರ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಹೇಳಿಕೆಯು ಕೆಳಕಂಡಂತಿದೆ:

"ದೂರುದಾರರಾದ ಶ್ರೀ ಎನ್ ಲಕ್ಕಪ್ಪ ರವರು ನನಗೆ ಚಿಕ್ಕಪ್ಪನಾಗಬೇಕು ಇವರು ನಂ 664, 2ನೇ ಅಡ್ಡರಸ್ತೆ, ವಿವೇಕಾನಂದನಗರ, ಜಾಲಹಳ್ಳಿ ಕ್ರಾಸ್, ಬೆಂಗಳೂರು ಇಲ್ಲಿ ಸ್ವಂತ ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. ಇವರ ಮನೆ ಮುಂದೆ ನನ್ನ ಚಿಕ್ಕಮ್ಮ ಶ್ರೀಮತಿ ರಂಗಮ್ಮ ರವರ ಮನೆ ಇರುತ್ತದೆ. ನಾನು ಈಗ್ಗೆ 6 ತಿಂಗಳ ಹಿಂದೆ ನನ್ನ ಚಿಕ್ಕಮ್ಮನ ಮನೆ ಹತ್ತಿರ ಹೋಗಿದ್ದಾಗ ಪೀಣ್ಯ ಪೊಲೀಸ್ ಠಾಣೆಯ ಪೊಲೀಸರಾದ ಶ್ರೀ ರಂಗಸ್ವಾಮಿ ರವರು ಬೆಳಗ್ಗೆ ಸುಮಾರು 10–

30 ರಿಂದ 11-00 ಗಂಟೆ ಸಮಯದಲ್ಲಿ ನನ್ನ ಚಿಕ್ಕಪ್ಪ ಶ್ರೀ ಲಕ್ಕಪ್ಪ ರವರ ಮನೆ ಬಳಿ ಬಂದು ಅವರನ್ನು ಮನೆಯಿಂದ ಹೊರಗೆ ಕರೆದು ನಿನ್ನ ಬಾಮೈದ ಪ್ರವೀಣ್ ಎಲ್ಲಿದ್ದಾನೆ ತೋರಿಸು ಬಾ ಎಂದು ಹೇಳಿದರು ಅಗ ಅವರು ನನ್ನ ಬಾಮೈದ ನನ್ನ ಮನೆಯಲ್ಲಿ ಇಲ್ಲ ಆತನು ಎಲ್ಲದ್ದಾನೆ ನನಗೆ ಗೊತ್ತಿಲ್ಲ ಮನೆ ಹತ್ತಿರ ಪದೇ ಪದೇ ಏಕೆ ಬರುತ್ತಿರಾ ಎಂದು ಹೇಳಿದರು. ಆಗ ಶ್ರೀ ರಂಗಸ್ವಾಮಿ ರವರು ನನ್ನ ಚಿಕ್ಕಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಸಾಹೇಬರ ಹತ್ತಿರ ಹೇಳು ಬಾ ಎಂದು ಅವರು ಜೊತೆಯಲ್ಲಿ ಕರೆದುಕೊಂಡು ಹೋಗಿ ಜಾಲಹಳ್ಳಿ ಮುಖ್ಯರಸ್ತೆಯಲ್ಲಿ ಕಾರಿನಲ್ಲಿದ್ದ ಪಿ.ಎಸ್.ಐ ರವರ ಮುಂದೆ ನಿಲ್ಲಿಸಿದ್ದು, ಪಿ.ಎಸ್.ಐ ರವರು ಸಹ ನನ್ನ ಚಿಕ್ಕಪ್ಪ ಲಕ್ಕಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ನಂತರ ಕಾರಿನಲ್ಲಿ ಕೂರಿಸಿಕೊಂಡು ಕರೆದುಕೊಂಡು ಹೋದರು. ಅವರು ಎಲ್ಲಿಗೆ ಕರೆದುಕೊಂಡು ಹೋದರು ನಂತರ ಏನಾಯಿತು ಎಂಬುದು ನನಗೆ ಗೊತ್ತಿರುವುದಿಲ್ಲ, ನನ್ನ ಚಿಕ್ಕಪ್ಪನ ಬಾಮೈದ ಪ್ರವೀಣ್‌ನು ಯಾವುದೋ ಗಲಾಟೆ ಮಾಡಿಕೊಂಡು ಜೈಲಿಗೆ ಹೋಗಿಬಂದಿರುತ್ತಾನೆ. ಈಗ ಆತನು ಎಲ್ಲಿದ್ದಾನೆ ಎಂಬುದು ಗೊತ್ತಿಲ್ಲ ಎಂದು ಮಾನ್ಯ ಆಯೋಗದ ಅಧಿಕಾರಿಗಳ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ವಿಚಾರಣಾಧಿಕಾರಿಗಳ ಪ್ರಶ್ನೆಗಳು:

1. ಪ್ರವೀಣ್‌ನು ನಿಮ್ಮ ಚಿಕ್ಕಪ್ಪ ಲೆಕ್ಕಪ್ಪ ರವರ ಮನೆಯಲ್ಲಿ ವಾಸವಿದ್ದುದನ್ನು ನೀವು ನೋಡಿರುತ್ತೀರಾ?

ಉತ್ತರ: ಪ್ರವೀಣ್‌ನು ಒಂದು ವರ್ಷದ ಹಿಂದೆ ಲೆಕ್ಕಪ್ಪ ರವರ ಮನೆಯ ರಸ್ತೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಮಾಸವಿದ್ದನು. ನಂತರ ಮನೆ ಖಾಲಿ ಮಾಡಿಕೊಂಡು ಹೋಗಿರುತ್ತಾನೆ. ಈತನು ಲೆಕ್ಕಪ್ಪ ರವರ ಮನೆಯಲ್ಲಿ ವಾಸವಿದ್ದುದನ್ನು ನಾನು ನೋಡಿರುವುದಿಲ್ಲ.

2. ಪೀಣ್ಯ ಪೊಲೀಸ್ ಠಾಣೆಯ ಪೊಲೀಸರು ಎಷ್ಟು ಬಾರಿ ಲೆಕ್ಕಪ್ಪ ರವರ ಮನೆ ಬಳಿ ಬಂದು ಅವರಿಗೆ ಬೈಯ್ದಿರುತ್ತಾರೆ?

ಉತ್ತರ: ಪೀಣ್ಯ ಪೊಲೀಸರು ನನ್ನ ಚಿಕ್ಕಪ್ಪನಾದ ಲೆಕ್ಕಪ್ಪ ರವರ ಮನೆ ಬಳಿ ಬಂದು ಬೈಯ್ದಿದ್ದನ್ನು ಒಂದು ಬಾರಿ ನೋಡಿರುತ್ತೇನೆ."

ದೂರರ್ಜಿ, ವರದಿಗಳು, ಅಭಿಪ್ರಾಯ ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿದ್ದು, ಶ್ರೀ ಎಮ್.ಎಲ್. ಬಿರಾಣಿ, ಪಿ.ಎಸ್.ಐ, ಪೀಣ್ಯ ಪೊಲೀಸ್ ಠಾಣೆ ಮತ್ತು ಅಂದಿನ ಪೀಣ್ಯ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್‌ಟೇಬಲ್ ಆದ ಶ್ರೀ ರಂಗಸ್ವಾಮಯ್ಯ, ಹಾಲಿ ಹೆಚ್.ಸಿ-6985, ನಂದಿನಿ ಲೇಔಟ್ ಪೊಲೀಸ್ ಠಾಣೆ ರವರು ದಿನಾಂಕ 02.06.2020 ರಂದು ಮಧ್ಯಾಹ್ನ 2-30 ಗಂಟೆಗೆ ದೂರುದಾರರ ಬಾಮೈದ ಶ್ರೀ ಪ್ರವೀಣ್‌ರವರನ್ನು ಹುಡುಕಿಕೊಂಡು ದೂರುದಾರರಾದ ಶ್ರೀ ಲಕ್ಕಪ್ಪ ರವರ ಮನೆ ಹತ್ತಿರ ಬಂದು ಅವರನ್ನು ಬೆದರಿಸಿ, ಹೆದರಿಸಿ, ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ರಾತ್ರಿ 10-00 ಗಂಟೆಯವರೆಗು ಠಾಣೆಯಲ್ಲೇ ಅಕ್ರಮವಾಗಿ ಇರಿಸಿಕೊಂಡಿರುತ್ತಾರೆ. ಮುಂದುವರೆದು ದಿನಾಂಕ 26-07-2020 ರಂದು ಶ್ರೀ ಎಮ್.ಎಲ್. ಬಿರಾಣಿ, ಪಿ.ಎಸ್.ಐ, ಪೀಣ್ಯ ಪೊಲೀಸ್ ಠಾಣೆ ಮತ್ತು ಅಂದಿನ ಪೀಣ್ಯ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್‌ಟೇಬಲ್ ಆದ ಶ್ರೀ ರಂಗಸ್ವಾಮಯ್ಯ, ಹಾಲಿ ಹೆಚ್.ಸಿ-6985, ನಂದಿನಿ ಲೇಔಟ್ ಪೊಲೀಸ್ ಠಾಣೆ ರವರುಗಳು ದೂರುದಾರರನ್ನು ಬೆದರಿಸಿ, ಅವಾಚ್ಯ

ಶಬ್ದಗಳಿಂದ ಬೈಯ್ದು, ಸಾರ್ವಜನಿಕವಾಗಿ ನಿಂದಿಸಿ ಅವಮಾನ ಮಾಡಿದ್ದಾರೆ ಮತ್ತು ಪೇದೆ ರಂಗಸ್ವಾಮಯ್ಯಯವರು ಸಹ ದೂರುದಾರರ ಮೇಲೆ ದೌರ್ಜನ್ಯವೆಸಗಿರುವುದು ದೂರುದಾರರ ಹೇಳಿಕೆ ಹಾಗೂ ಪ್ರತ್ಯಕ್ಷ ಸಾಕ್ಷಿಯಾದ ಶ್ರೀ ಕುಮಾರ್ ರವರ ಹೇಳಿಕೆಯಿಂದ ಕಂಡುಬಂದ ಕಾರಣ, ಡಿ.ಜಿ & ಐ.ಜಿ.ಪಿ., ಬೆಂಗಳೂರು ಇವರಿಗೆ ಶ್ರೀ ಎಮ್.ಎಲ್. ಬಿರಾಣಿ, ಪಿ.ಎಸ್.ಐ, ಪೀಣ್ಯ ಪೊಲೀಸ್ ಠಾಣೆ ಮತ್ತು ಅಂದಿನ ಪೀಣ್ಯ ಪೊಲೀಸ್ ಠಾಣೆಯ ಪೊಲೀಸ್ ಕಾನ್ಸ್‌ಟೇಬಲ್ ಆದ ಶ್ರೀ ರಂಗಸ್ವಾಮಯ್ಯ, ಹಾಲಿ ಹೆಚ್.ಸಿ-6985, ನಂದಿನಿ ಲೇಔಟ್ ಪೊಲೀಸ್ ಠಾಣೆ ರವರುಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ 31-05-2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.